

## ಕರ್ನಾಟಕದ ಹಾಕಿ ತಂಡದಲ್ಲಿ ನವ ಮನ್ವಂತರ

# ಚಿನ್ನದ ಹೊಳಪಿನ ಕಥೆಗಳು...

ಹಾಕಿ ಕ್ರೀಡೆಯಲ್ಲಿ ಕರ್ನಾಟಕ ತಂಡ 'ನ್ಯಾಷನಲ್ ಗೇಮ್ಸ್'ನಲ್ಲಿ ಮೊದಲ ಬಾರಿಗೆ ಚಿನ್ನದ ಪದಕ ಜಯಿಸಿದೆ. ಈ ಸಾಧನೆಯ ಕಥೆ ಕರ್ನಾಟಕದ ಹಾಕಿ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಮಾತ್ರವಲ್ಲದೇ, ರಾಜ್ಯದಲ್ಲಿ ನವ ಮನ್ವಂತರಕ್ಕೂ ಕಾರಣವಾಗಲಿದೆ. ಗ್ರಾಮೀಣ ಪ್ರದೇಶಗಳ ಪ್ರತಿಭಾನ್ವಿತ ಆಟಗಾರರ ಪ್ರತಿಭಾ ಪ್ರದರ್ಶನಕ್ಕೂ ವೇದಿಕೆಯಾಗಲಿದೆ.

■ ಪ್ರಮೋದ

ಒಂದು ತಿಂಗಳ ಹಿಂದೆ ಗುಜರಾತ್‌ನಲ್ಲಿ ಕರ್ನಾಟಕ ಹಾಕಿ ತಂಡದ ಆಟಗಾರರು ಮಿರಮಿರನೇ ಮಿನುಗುತ್ತಿದ್ದ ಚಿನ್ನದ ಪದಕಗಳನ್ನು ಕೊರಳಲ್ಲಿ ಧರಿಸಿ ಸಂಭ್ರಮಿಸುತ್ತಿದ್ದರು. ಅದು ಕರ್ನಾಟಕದ ಹಾಕಿ ಇತಿಹಾಸದಲ್ಲಿ 'ಚಿನ್ನದ' ದಿನ.

ಹಾಕಿ ಕ್ರೀಡೆಯಲ್ಲಿ ಕರ್ನಾಟಕ ತಂಡ ದೇಶಕ್ಕೆ ಹಲವಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಆಟಗಾರರು ಹಾಗೂ ಒಲಿಂಪಿಯನ್‌ಗಳನ್ನು ಕೊಡುಗೆಯಾಗಿ ನೀಡಿದ್ದರೂ 'ನ್ಯಾಷನಲ್ ಗೇಮ್ಸ್'ನಲ್ಲಿ ಒಮ್ಮೆಯೂ ಚಿನ್ನದ ಪದಕ ಗೆಲ್ಲಲು ಸಾಧ್ಯವಾಗಿರಲಿಲ್ಲ. ಅನುಭವಿ ಹಾಗೂ ಹೊಸಬರ ತಂಡ ಈ ಸಲ ಚೊಚ್ಚಲ ಚಿನ್ನದ ಪದಕ ಜಯಿಸಿತು. ರಾಜ್ಯ ತಂಡ ಲೀಗ್ ಹಂತದಲ್ಲಿ ಉತ್ತರ ಪ್ರದೇಶ, ತಮಿಳುನಾಡು, ಜಾರ್ಖಂಡ್, ಕ್ವಾರ್ಟರ್ ಫೈನಲ್‌ನಲ್ಲಿ ಗುಜರಾತ್ ವಿರುದ್ಧ, ಸೆಮಿಫೈನಲ್‌ನಲ್ಲಿ ಹರಿಯಾಣ ಮತ್ತು ಫೈನಲ್‌ನಲ್ಲಿ ಉತ್ತರಪ್ರದೇಶ ಎದುರು ಜಯಿಸಿ ಚಾಂಪಿಯನ್ ಆಯಿತು.

ಪದಕ ಗೆದ್ದ ಸಾಧನೆಯ ಕಥೆ ಕರ್ನಾಟಕದ ಹಾಕಿ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಮಾತ್ರವಲ್ಲದೇ ರಾಜ್ಯದಲ್ಲಿ ಹಾಕಿ ಬೆಳವಣಿಗೆಯ ಹೊಸ ಮಗ್ಗುಲನ್ನೂ ಪರಿಚಯಿಸಿತು.

ಕೆಲವು ದಶಕಗಳ ಹಿಂದೆ ಕರ್ನಾಟಕ ತಂಡದಲ್ಲಿ ಬೆಂಗಳೂರು ಹಾಗೂ ಕೊಡಗು ಜಿಲ್ಲೆಗಳಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಆಟಗಾರರು ಇರುತ್ತಿದ್ದರು. 'ನ್ಯಾಷನಲ್ ಗೇಮ್ಸ್'ನಂಥ ಮಹತ್ವದ ಟೂರ್ನಿಗಳು ನಡೆದಾಗ ಈ ಆಟಗಾರರು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ದೇಶದ ತಂಡವನ್ನು ಪ್ರತಿನಿಧಿಸಿದ್ದರೆ, ರಾಜ್ಯ ತಂಡ ಹೊಸ ಆಟಗಾರರನ್ನು ನೆಚ್ಚಿಕೊಂಡು ಸವಾಲು ಎದುರಿಸಬೇಕಾಗುತ್ತಿತ್ತು. ಹೀಗಾಗಿ 98 ವರ್ಷಗಳ ಇತಿಹಾಸವಿರುವ, ಮೊದಲು 'ಇಂಡಿಯನ್ ಒಲಿಂಪಿಕ್ಸ್ ಗೇಮ್ಸ್' ಎಂದೇ ಹೆಸರಾಗಿದ್ದ ಈಗಿನ 'ನ್ಯಾಷನಲ್ ಗೇಮ್ಸ್'ನಲ್ಲಿ ಚಿನ್ನದ ಪದಕ ಗೆಲ್ಲಲು ಇಷ್ಟು ವರ್ಷಗಳ ಕಾಲ ಕಾಯಬೇಕಾಯಿತು.

ಕರ್ನಾಟಕ ಹಾಕಿ ತಂಡ ಬಲಿಷ್ಠವಾಗಿದ್ದರೂ ಹಲವು ವರ್ಷಗಳಿಂದ ಒಂದೇ ಪ್ರದೇಶಕ್ಕೆ ಸೀಮಿತವಾಗಿದ್ದರಿಂದ ಹೊಸ ಪ್ರತಿಭೆಗಳ ಶೋಧ ವಿರಳವಾಗಿತ್ತು. ರಾಜ್ಯದ 'ಹಾಕಿ ತವರು' ಕೊಡಗು ಜಿಲ್ಲೆಯಿಂದ ಅನೇಕ ಆಟಗಾರರು ರಾಜ್ಯ, ರಾಷ್ಟ್ರ ಹಾಗೂ ವಿಶ್ವವಿದ್ಯಾಲಯ ತಂಡಗಳಲ್ಲಿ ಮಿಂಚಿದರು. ಹೊರರಾಜ್ಯಗಳಿಗೆ ಹೋಗಿ ಸಾಧನೆ ಮಾಡಿದರು.

ಕೊಡಗು ಭಾಗದಲ್ಲಿ ಹಾಕಿ ಜನಪ್ರಿಯತೆ ಗಳಿಸುವುದಕ್ಕೂ ಮೊದಲೇ ಬೆಳಗಾವಿಯ ಬಂಡು ಪಾಟೀಲ ಹಾಗೂ ಬೆಂಗಳೂರಿನ ಮುನಿಸ್ವಾಮಿ ರಾಜಗೋಪಾಲ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಹೆಸರನ್ನು ಛಾಪು ಒತ್ತಿದ್ದರು.

ಮುನಿಸ್ವಾಮಿ ರಾಜಗೋಪಾಲ್ 1952ರ ಹೆಲ್ಸಿಂಕಿ ಒಲಿಂಪಿಕ್ಸ್‌ನಲ್ಲಿ ದೇಶ ಪ್ರತಿನಿಧಿಸಿದ್ದರು.